# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 100(45) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಮರಿತಿಬ್ಬೇಗೌಡ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13.02.2024 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸಾದರಮಂಗಲ (ವೈಟ್ ಫೀಲ್ಡ್) ಕೈಗಾರಿಕಾ ಪ್ರದೇಶದಲ್ಲಿ ಕಾನಕಾರ್ಡ್ ಸಂಸ್ಥೆಯವರಿಗೆ ಕೆ.ಐ.ಎ.ಡಿ.ಬಿ. ವತಿಯಿಂದ ಎಷ್ಟು ಎಕರೆ ಜಮೀನನ್ನು ಹಂಚಿಕೆ ಮಾಡಲಾಗಿದೆ; | ಕೆಐಎಡಿಬಿ ಯು M/s.Concord India Pvt Ltd ರವರಿಗೆ ಬೆಂಗಳೂರು ಜಿಲ್ಲೆಯ ಕಾಡುಗೋಡಿ ಕೈಗಾರಿಕಾ ಪ್ರದೇಶದಲ್ಲಿನ ಸರ್ವೆ ನಂ.1 ಬ್ಲಾಕ್ ನಂ.73 ನಿವೇಶನ ಸಂಖ್ಯೆ : 6 ರಲ್ಲಿ 78 ಎಕರೆ 2219 ಚ.ಮೀ ಜಮೀನನ್ನು ಹಂಚಿಕೆ ಮಾಡಿರುತ್ತದೆ. |
| ಆ | ಯಾವ ಉದ್ದೇಶಕ್ಕೆ ಭೂಸ್ವಾಧೀನವನ್ನು ಯಾವ ದರದಂತೆ, ಯಾವ ದಿನಾಂಕ ದಂದು ಹಂಚಿಕೆ ಮಾಡಲಾಗಿದೆ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ಮಂಡಳಿಯು M/s Concord India Pvt Ltd ರವರಿಗೆ ಪ್ರತಿ ಎಕರೆಗೆ ರೂ.50,00,000/- ದರದಂತೆ ದಿನಾಂಕ:07.06.2007 ರಂದು 11 ವರ್ಷಗಳ ಅವಧಿಗೆ Infrastructure facilities for MNC IT&ITeS ಚಟುವಟಿಕೆಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ. |
| ಇ | ಸಂಸ್ಥೆಯವರಿಗೆ ಹಂಚಿಕೆಯಾದ ಭೂಮಿಯಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಿದ್ದಾರೆಯೇ; | ಕಾಡುಗೋಡಿ ಸರ್ವೆ ನಂ.1 ರಲ್ಲಿ ಭೂಸ್ವಾದೀನಪಡಿಸಿದ ಜಮೀನಿನಲ್ಲಿನ ನಿವೇಶನಗಳನ್ನು ಹಂಚಿಕೆ ಮಾಡಿದ M/s Concord India Pvt Ltd ಹಾಗೂ ಇತರೆ ಹಂಚಿಕೆದಾರರಿಗೆ ಅರಣ್ಯ ಇಲಾಖೆ ರವರು ಸದರಿ ಜಮೀನು ಸರ್ಕಾರಿ ಅರಣ್ಯ ಪ್ರದೇಶವೆಂದು ನೀಡಿದ ನೋಟಿಸ್ ಮತ್ತು ಪ್ರಕ್ರಿಯೆಯನ್ನು ಪ್ರಶ್ನಿಸಿ M/s Concord India Pvt Ltd ರವರು WP.No.7200/2008 c/w 29765-666/2009 ಪ್ರಕರಣವನ್ನು ದಾಖಲಿಸಿದ್ದು, ವಿಚಾರಣೆ ನಂತರ ಅರಣ್ಯ ಇಲಾಖೆ ರವರು ನೀಡಿದ ನೋಟಿಸ್ ಮತ್ತು ಪ್ರಕ್ರಿಯೆಯನ್ನು ರದ್ದುಪಡಿಸಿ, ದಿನಾಂಕ : 25.05.2012 ರಂದು ಆದೇಶ ಹೊರಡಿಸಲಾಗಿದೆ.<br><br>ಸದರಿ ಆದೇಶವನ್ನು ಪ್ರಶ್ನಿಸಿ, ಅರಣ್ಯ ಇಲಾಖೆ ರವರು WA No. 4283/ 2012 & 8577-8578/2012 c/w WA No.4205 / 2008 ಅಪೀಲ್ ಪ್ರಕರಣವು ದಾಖಲಾಗಿ ವಿಚಾರಣೆ ನಂತರ ದಿನಾಂಕ:23.07.2019 ರಂದು ವಜಾಗೊಂಡಿರುತ್ತದೆ. |

| | | |
|---|---|---|
| | | ಸದರಿ ಆದೇಶವನ್ನು ಪ್ರಶ್ನಿಸಿ ಅರಣ್ಯ ಇಲಾಖೆ ರವರು S.L.P (Civil) Dairy No(s) 10430 / 2020 ಪ್ರಕರಣವನ್ನು ದಾಖಲಿಸಿದ್ದು, ದಿನಾಂಕ: 19.11.2020 ರಂದು ವಜಾಗೊಂಡಿರುತ್ತದೆ.<br><br>ಮೇಲ್ಕಾಣಿಸಿದಂತೆ ಹಂಚಿಕೆ ಮಾಡಿದ ನಿವೇಶನ ಸಂಬಂಧ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗಿದ್ದ ಕಾರಣ ಉದ್ದೇಶಿತ ಯೋಜನೆಯನ್ನು ಅನುಷ್ಠಾನಗೊಳಿಸಿರುವುದಿಲ್ಲ. |
| ಈ | ಇತ್ತೀಚೆಗೆ ಕಾನ್‌ಕಾರ್ಡ್ ಸಂಸ್ಥೆಯವರಿಗೆ ಹಂಚಿಕೆ ಮಾಡಿದ ಜಮೀನನ್ನು ನಿಯಮ ಬಾಹಿರವಾಗಿ ಎಂಬೆಸಿ ಸಂಸ್ಥೆಗೆ ವರ್ಗಾವಣೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | M/s.Concord India Pvt Ltd ಸಂಸ್ಥೆಯ ಹೆಸರನ್ನು ಕಂಪನಿಯು ದಿನಾಂಕ: 22.10.2020 ರಂದು M/s.Embassy East Business Park Pvt Ltd ಸಂಸ್ಥೆಗಾಗಿ Registrar of Companies ನಲ್ಲಿ ಬದಲಾವಣೆ ಮಾಡಿಕೊಂಡಿರುತ್ತಾರೆ. ತದನಂತರ ಸದರಿ ಕಂಪನಿಯು ಮಂಡಳಿಗೆ ದಿನಾಂಕ: 09.11.2020 ರ ತಮ್ಮ ಮನವಿಯ ಮೂಲಕ ಮಂಡಳಿಯ ಗಮನಕ್ಕೆ ತಂದು ಹೆಸರು ಬದಲಾವಣೆಗೆ ಅನುಮತಿ ಕೋರಿರುತ್ತಾರೆ.<br><br>ಮಂಡಳಿಯಲ್ಲಿರುವ, ಹಾಲಿ ಹಕ್ಕು ವರ್ಗಾವಣೆ ನೀತಿಯನ್ವಯ ಹಂಚಿಕೆದಾರರು ಸಂವಿಧಾನ ಬದಲಾವಣೆ ಮಾಡಿಕೊಳ್ಳಲು ಅವಕಾಶವಿದ್ದು, ಸದರಿ ಪ್ರಸ್ತಾವನೆಯನ್ನು ಮಂಡಳಿಯಲ್ಲಿ ಪರಿಶೀಲಿಸಿ, ತದನಂತರ Practicing Company Secretary ಇವರಿಂದ ದಿನಾಂಕ : 26.06.2021 ರಂದು ಅಭಿಪ್ರಾಯ ಪಡೆದು M/s.Concord India Pvt Ltd., ಹೆಸರಿನ ಬದಲಾಗಿ M/s.Embassy East Business Park Pvt Ltd., ಹೆಸರಿಗೆ ಪರಿಗಣಿಸಲಾಗಿದೆ.<br><br>ಅದರಂತೆ, ದಿನಾಂಕ : 09.07.2021 ರಂದು M/s.Concord India Pvt Ltd., ಕಂಪನಿಯ ಮೂಲ ಷೇರುದಾರರು M/s.Embassy East Business Park Pvt Ltd ಕಂಪನಿಯಲ್ಲಿ ಕನಿಷ್ಟ ಶೇ.51 ಷೇರನ್ನು ಹೊಂದಿರಬೇಕೆಂದು ಷರತ್ತನ್ನು ವಿಧಿಸಿ ಹಾಗೂ ದಿನಾಂಕ : 07.06.2007 ರಂದು ನೆರವೇರಿಸಿರುವ ಗುತ್ತಿಗೆ ಕರಾರಿನ ಷರತ್ತುಗಳು ಮುಂದುವರೆಯುವ ಷರತ್ತಿಗೊಳಪಟ್ಟು ಹೆಸರು ಬದಲಾವಣೆಗೆ ಅನುಮೋದನೆ ನೀಡಲಾಗಿದೆ. |
| ಉ | ದಾಬಸಪೇಟೆ 4 ಮತ್ತು 5ನೇ ಹಂತದ ಕೈಗಾರಿಕಾ ಪ್ರದೇಶದಲ್ಲಿ (ಅವೇರಹಳ್ಳಿ ಕೈಗಾರಿಕಾ ಪ್ರದೇಶ) ಎಂಬೆಸಿ ಸಂಸ್ಥೆಗೆ ಲಾಜಿಸ್ಟಿಕ್ ಪಾರ್ಕ್ ನಿರ್ಮಾಣಕ್ಕೆ 120 ಎಕರೆ ಜಮೀನನ್ನು ಯಾವ ದರದಲ್ಲಿ, ಯಾವಾಗ ಹಂಚಿಕೆ ಮಾಡಲಾಗಿದೆ; (ಪೂರ್ಣ ವಿವರಗಳೊಡನೆ ಮಾಹಿತಿ ನೀಡುವುದು) | ಸರ್ಕಾರಿ ಆದೇಶ ಸಂ:ಸಿಐ 55 ಎಸ್ ಪಿಐ 2019 ದಿ:05-03-2019 ಮತ್ತು ಸರ್ಕಾರಿ ಆದೇಶ ಸಂ:ಸಿಐ 55 ಎಸ್ ಪಿಐ 2019 ದಿ:05-05-2021 ರಂತೆ, ಮೆ:Embassy Industrial Parks Pvt Ltd ರವರಿಗೆ Industrial and Logistic Park ಸ್ಥಾಪಿಸುವ ಯೋಜನೆಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆ, ಡಾಬಸ್ ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದ ಬ್ಲಾಕ್ ಸಂ:1-ಎ-ಪಾರ್ಟ್, 1-ಬಿ & 1-ಸಿ ರಲ್ಲಿನ 125.00 ಎಕರೆ ಜಮೀನನ್ನು (bulk allotment rate) ಎಕರೆಗೆ ರೂ.156.00 ಲಕ್ಷದಂತೆ, ಶೇ.30 ರಷ್ಟು ಮುಂಗಡ ಹಣ ರೂ.57,37,22,063/-ಗಳನ್ನು ಪಾವತಿಸಿಕೊಂಡು ದಿನಾಂಕ:03-06-2021 ರಂದು ಹಂಚಿಕೆ ಮಾಡಲಾಗಿದೆ. |

| | | |
|---|---|---|
| ಊ) | ನಿಗದಿತ ಕಾಲಾವಧಿಯಲ್ಲಿ ಹಂಚಿಕೆ ಪಡೆದ ಜಮೀನಿಗೆ ನಿಗದಿಗೊಳಿಸಲಾದ ಒಟ್ಟು ಮೊತ್ತವನ್ನು ಕೆ.ಐ.ಎ.ಡಿ.ಬಿ. ಗೆ ಪಾವತಿಸಿದ್ದಾರೆಯೇ; | ಮೆ:Embassy Industrial Parks Pvt Ltd ರವರು ಹಂಚಿಕೆ ಪತ್ರದಲ್ಲಿನ ಷರತ್ತುಗಳನ್ವಯ ಶೇ.70 ರಷ್ಟು ಬಾಕಿ ಹಣ ರೂ.136,77,30,000/- ಗಳನ್ನು ದಿನಾಂಕ:03-09-2021 ರೊಳಗೆ ಪಾವತಿಸಬೇಕಿತ್ತು. ಆದರೆ, ಸದರಿ ಕಂಪನಿಯು ತಮಗೆ ಹಂಚಿಕೆಯಾಗಿರುವ ಡಾಬಸ್ ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದ ಬ್ಲಾಕ್ ಸಂ:1 ರಲ್ಲಿ ಮಧ್ಯದಲ್ಲಿ ಬರುವ ರಸ್ತೆಯನ್ನು ಬದಲಾವಣೆ ಮಾಡಿ ನಿವೇಶನದ ಆಕಾರವನ್ನು ಬದಲಾವಣೆ ಮಾಡಲು ಕೋರಿದ್ದರು.<br><br>ದಿನಾಂಕ:17-06-2021ರ ಕೆ.ಐ.ಎ.ಡಿ. ಮಂಡಳಿ ಸಭೆಯಲ್ಲಿ ಡಾಬಸ್ ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶ ಪರಿಷ್ಕೃತ ವಿನ್ಯಾಸ ನಕ್ಷೆ ಅನುಮೋದನೆಯಾಗಿದ್ದು, ಸದರಿ ಪರಿಷ್ಕೃತ ವಿನ್ಯಾಸ ನಕ್ಷೆಯಲ್ಲಿ ಬ್ಲಾಕ್ ಸಂ:1 ರಲ್ಲಿನ ನಿವೇಶನಗಳಿಗೆ ರಸ್ತೆ ಬದಲಾವಣೆಯಾಗಿ ಆಕಾರ ಬದಲಾವಣೆಯಾಗಿರುತ್ತದೆ.<br><br>ಅದರಂತೆ, ಮೆ:Embassy Industrial Parks Pvt Ltd ರವರಿಗೆ ಡಾಬಸ್ ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶ ಬ್ಲಾಕ್ ಸಂ:1-ಎ ರಲ್ಲಿ 124.20 ಎಕರೆ ಜಮೀನು realigned ಆಗಿರುವ ಬಗ್ಗೆ ದಿನಾಂಕ:23.09.2021 ರಂದು ತಿಳಿಸಲಾಗಿದೆ.<br><br>ಅಲ್ಲದೇ, ಸದರಿ ಮಂಡಳಿ ಸಭೆಯಲ್ಲಿ, ಡಾಬಸ್ ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದ (bulk allotment rate) ಎಕರೆಗೆ ರೂ.139.00 ಲಕ್ಷದಂತೆ ಸಮಾನ ದರ ನಿಗಧಿಪಡಿಸಿರುತ್ತದೆ.<br><br>ಮೆ:Embassy Industrial Parks Pvt Ltd ರವರು ದಿನಾಂಕ:28.09.2021 ರ ತಮ್ಮ ಪತ್ರದಲ್ಲಿ ಪರಿಷ್ಕೃತ ವಿನ್ಯಾಸ ನಕ್ಷೆಯಂತೆ ತಮಗೆ ಹಂಚಿಕೆಯಾದ ಬ್ಲಾಕ್ ನಲ್ಲಿ ರಸ್ತೆ ಬದಲಾವಣೆಯಾಗಿರುವುದರಿಂದ, ಹಾಗೂ ಹಂಚಿಕೆಯಾದ ಜಮೀನು ಪೈಕಿ 3 ಎಕರೆ ಜಮೀನಿಗೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳ್ಳದ ಕಾರಣ ಬಾಕಿ ಹಣ ಪಾವತಿಸಲು ಹೆಚ್ಚಿನ ಕಾಲಾವಕಾಶ ಕೋರಿದ್ದರು.<br><br>ಅದರಂತೆ, ಮೆ:Embassy Industrial Parks Pvt Ltd ರವರಿಗೆ ದಿನಾಂಕ:26-11-2021 ರಂದು ಪರಿಷ್ಕೃತ ಹಂಚಿಕೆ ದರ ಎಕರೆಗೆ ರೂ.139.00 ಲಕ್ಷದಂತೆ ಬಾಕಿ ಹಣವನ್ನು ಬಡ್ಡಿಯೊಂದಿಗೆ ಪಾವತಿಸಲು ತಿಳಿಸಲಾಗಿದೆ.<br><br>ಮೆ:Horizon Industrial Park Pvt Ltd., (formerly known as M/s.Embassy Industrial Parks Pvt Ltd) ರವರು ಬಾಕಿ ಹಣ ರೂ.114,71,60,000/- ಗಳನ್ನು ದಿನಾಂಕ:16-02-2022 ರಂದು ಪಾವತಿಸಿರುತ್ತಾರೆ.<br><br>ದಿನಾಂಕ:22-10-2022 ರಂದು ನಡೆದ ರಾಜ್ಯ ಉನ್ನತ ಮಟ್ಟದ ಒಪ್ಪಿಗೆ ಸಮಿತಿ ಸಭೆಯಲ್ಲಿ, ಮೆ:Horizon Industrial Park Pvt Ltd (formerly known as ಮೆ.Embassy Industrial Parks Pvt Ltd) ರವರ ಯೋಜನೆ ಅನುಮೋದನೆಯನ್ನು ಮೆ:Horizon Industrial Park Pvt Ltd ನಿಂದ ಮೆ:Embassy Industrial Park Hosur Pvt Ltd (subsidiary of |

| | | |
|---|---|---|
| | | ಮೆ:Horizon Industrial Park Pvt Ltd., - formerly known as ಮೆ.Embassy Industrial Parks Pvt Ltd) ಕಂಪನಿ ಹೆಸರಿಗೆ ವರ್ಗಾವಣೆ ಮಾಡಲು ಅನುಮೋದನೆ ನೀಡಿರುತ್ತದೆ.<br><br>ಮುಂದುವರೆದು, ಮೆ:Embassy Industrial Park Hosur Pvt Ltd ಹೆಸರಿಗೆ ಡಾಬಸ್ ಪೇಟೆ 5ನೇ ಹಂತ ಕೈಗಾರಿಕಾ ಪ್ರದೇಶದ ಬ್ಲಾಕ್ ಸಂ:1-ಎ ರಲ್ಲಿ 502654 ಚದರ ಮೀಟರ್ (124.21 ಎಕರೆ) ಜಮೀನಿಗೆ ದಿನಾಂಕ:04-03-2023 ರಂದು ಸ್ವಾಧೀನ ಪತ್ರ ನೀಡಲಾಗಿದೆ. ಕಂಪನಿಯವರಿಗೆ ಸದರಿ ಜಮೀನಿಗೆ ಸಂಬಂಧಿಸಿದಂತೆ ಜಮೀನಿನ ಬಾಕಿ ಹಣವನ್ನು ತಡವಾಗಿ ಪಾವತಿಸಿರುವುದಕ್ಕೆ ರೂ.4,70,43,856/- ಗಳ ಬಡ್ಡಿ ಹಣವನ್ನು ಪಾವತಿಸಲು ದಿನಾಂಕ:18-05-2023 ರಂದು ಕಂಪನಿಯವರಿಗೆ ತಿಳಿಸಲಾಗಿದೆ. ಅದರಂತೆ ಕಂಪನಿಯವರು ದಿನಾಂಕ:07-07-2023 ಮತ್ತು ದಿನಾಂಕ:29-08-2023 ರಂದು ಒಟ್ಟಾರೆ ರೂ.4,74,43,856/- ಗಳನ್ನು ಮಂಡಳಿಗೆ ಪಾವತಿಸಿರುತ್ತಾರೆ. ದಿನಾಂಕ:04-09-2023 ರಂದು ಸದರಿ ಜಮೀನಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ. |
| ಖ | ನಿಗದಿತ ಅವಧಿಯಲ್ಲಿ ಹಣ ಪಾವತಿಸದೆ ಇದ್ದರೂ ಮಂಡಳಿಯಿಂದ ಹಂಚಿಕೆ ರದ್ದುಪಡಿಸದಿರಲು ಕಾರಣಗಳೇನು? | ಸದರಿ ಕಂಪನಿಗೆ ಹಂಚಿಕೆಯಾದ ಡಾಬಸ್ ಪೇಟೆ 5ನೇ ಹಂತದ ಕೈಗಾರಿಕಾ ಪ್ರದೇಶದ ಬ್ಲಾಕ್ ನಲ್ಲಿ ಸುಮಾರು 03 ಎಕರೆ ಜಮೀನಿಗೆ ಭೂಸ್ವಾಧೀನ ಪ್ರಕ್ರಿಯೆ ಇನ್ನೂ ಪೂರ್ಣಗೊಂಡಿರಲಿಲ್ಲ ಅಲ್ಲದೇ ಸದರಿ ಕೈಗಾರಿಕಾ ಪ್ರದೇಶದ ವಿನ್ಯಾಸ ನಕ್ಷೆಯನ್ನು ಪರಿಷ್ಕೃತಗೊಳಿಸಿ ಹಂಚಿಕೆಯಾದ ಬ್ಲಾಕಿನ ಆಕಾರ ಬದಲಾವಣೆ ಮಾಡಿದ್ದರಿಂದ, ಹಂಚಿಕೆಯನ್ನು ರದ್ದುಪಡಿಸಿರಲಿಲ್ಲ.<br><br>ತದನಂತರ, ಸದರಿ ಕಂಪನಿಯವರು ಮೇಲೆ ತಿಳಿಸಿದಂತೆ ನಿವೇಶನದ ಬಾಕಿ ಹಣವನ್ನು ತಡವಾಗಿ ಪಾವತಿಸಿರುವುದಕ್ಕೆ ಅನ್ವಯಿಸುವ ಬಡ್ಡಿಯೊಂದಿಗೆ ಪಾವತಿಸಿರುವುದರಿಂದ ಜಮೀನಿನ ಹಂಚಿಕೆಯನ್ನು ರದ್ದುಪಡಿಸಿರುವುದಿಲ್ಲ. |

**ಸಂಖ್ಯೆ: ಸಿಐ 52 ಐಎಪಿ 2024**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**